KACM710001322023

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

ಉಪಸ್ಥಿತರು

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕಃ **29** ನೇ ಏಪ್ರಿಲ್ **2026**

## ಅಸಲು ದಾವಾ ಸಂಖ್ಯೆ 46/2023

ವಾದಿ/ಯರುಃ

ಇ.ಟಿ.ನಾಗೇಂದ್ರಕುಮಾರನಾಯ್ಕ ಬಿನ್ ತೋಳಚನಾಯ್ಕ, ಸುಮಾರು 23 ವರ್ಷ ವಯಸ್ಸು, ವಿದ್ಯಾರ್ಥಿ, ವಾಸಃ ಇಟ್ಟಿಗೆ ಗ್ರಾಮ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು.

(ಪ್ರತಿನಿಧಿಸುವವರುಃ ಶ್ರೀ ಹೆಚ್.ಎಸ್.ಶಿವಶಂಕರನಾಯ್ಕ, ನ್ಯಾಯವಾದಿಗಳು)

-ವಿರುದ್ಧ-

ಪ್ರತಿವಾದಿ/ಯರುಃ

1) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2) ಡಿ.ಡಿ.ಪಿ.ಐ. ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
3) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ, ತರೀಕೆರೆ.
4) ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ, 6 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.
5) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, 18 ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6) ಮುಖ್ಯೋಪಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಇಟ್ಟಿಗೆ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು.

Visit **ecourts.gov.in** for updates or download mobile app "**eCourts Services**" from Android or iOS

KACM710001322023

7) ಮುಖ್ಯೋಪಧ್ಯಾಯರು, ಬಸವೇಶ್ವರ ಪ್ರೌಢಶಾಲೆ, ಲಕ್ಷ್ಮೀಸಾಗರ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು.

8) ಪ್ರಾಂಶುಪಾಲರು, ಮಾನಸ ಪದವಿ ಪೂರ್ವ ಕಾಲೇಜು, ತರೀಕೆರೆ.

9) ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತರೀಕೆರೆ.

(1 ರಿಂದ 6, 9 ನೇ ಪ್ರತಿವಾದಿಯರ ಪರ ಃ ಸಹಾಯಕ ಸರ್ಕಾರಿ ವಕೀಲರು.
7, 8 ನೇ ಪ್ರತಿವಾದಿಯರು ಃ ಏಕತರ್ಫಿಯಾಗಿರುತ್ತಾರೆ.)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 27.01.2023 | | |
| 2 | ದಾವಾ ಸ್ವರೂಪ | ಘೋಷಣೆ, ನಿರ್ದೇಶನ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 11.02.2026 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 27.04.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 03 | 03 | 00 |

## - ತೀರ್ಪು -

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ವಾದಿಯ ಶಾಲಾ ದಾಖಲಾತಿಗಳಲ್ಲಿ ವಾದಿಯ ತಂದೆಯ ಹೆಸರು ಇ.ಜಿ.ರಾಜನಾಯ್ಕ ಎಂದು ತಪ್ಪಾಗಿ ನಮೂದಾಗಿರುವುದನ್ನು ತೆಗೆದು ತೊಳಚನಾಯ್ಕ ಎಂದು ನಮೂದಿಸಲು ಅಸಲು ದಾವಾ ಸಂಖ್ಯೆ 87/16 ರಲ್ಲಿ ಆದೇಶ ನೀಡಿದ್ದು, ತೊಳಚನಾಯ್ಕ ರವರ ಹೆಸರಿನ ಇನಿಷಿಯಲ್ ನಂತೆ ವಾದಿಯ ಹೆಸರಿನ ಮುಂದೆ ಇ.ಟಿ.ನಾಗೇಂದ್ರಕುಮಾರನಾಯ್ಕ ಮತ್ತು ಆತನ ತಂದೆಯ

Visit **ecourts.gov.in** for updates or download mobile app "**eCourts Services**" from Android or iOS

ಹೆಸರನ್ನು ತೋಳಚನಾಯ್ಕ ಎಂದು ಸರಿಯಾಗಿ ನಮೂದಿಸುವಂತೆ ಪ್ರತಿವಾದಿಯರಿಗೆ ನಿರ್ದೇಶಿಸುವ ಮೂಲಕ ಘೋಷಣಾತ್ಮಕ ಡಿಕ್ರಿ ಕೋರಿ ಸಲ್ಲಿಸಿರುತ್ತಾರೆ.

**2.** ವಾದಿಯ ವಾದಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆ ಃ

ವಾದಿಯು ದಿನಾಂಕ 21.04.1999 ರಂದು ಜನಿಸಿದ್ದು, ನಂತರ ವಾದಿಯನ್ನು 6 ನೇ ಪ್ರತಿವಾದಿಯ ಬಳಿ ದಾಖಲಾತಿ ಸಂಖ್ಯೆ 11/2005-196 ರಂತೆ 1 ನೇ ತರಗತಿಗೆ ದಾಖಲಿಸಿದ್ದು, ಸದರಿ ಶಾಲೆಗೆ ದಾಖಲಿಸುವ ಸಂದರ್ಭದಲ್ಲಿ ವಾದಿಯರ ಕುಟುಂಬದವರು ವಾದಿಯ ತಂದೆಯ ಹೆಸರನ್ನು ತೋಳಚನಾಯ್ಕ ಎಂದು ಸರಿಯಾಗಿ ಹೇಳಿ ದಾಖಲಿಸಿದ್ದು, ಆದರೆ ಸದರಿ ಶಾಲಾ ದಾಖಲಾತಿಗಳಲ್ಲಿ 6 ನೇ ಪ್ರತಿವಾದಿಯ ಕೈತಪ್ಪಿನಿಂದ ವಾದಿಯ ತಂದೆಯ ಹೆಸರು ಇ.ಜಿ.ರಾಜನಾಯ್ಕ ಎಂದು ತಪ್ಪಾಗಿ ನಮೂದಾಗಿರುತ್ತದೆ. ನಂತರ ವಾದಿಯು ಸದರಿ ಶಾಲೆಯಲ್ಲಿ 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ನಂತರ ವಾದಿಯು 7 ನೇ ಪ್ರತಿವಾದಿಯ ಶಾಲೆಯಲ್ಲಿ 8 ರಿಂದ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮುಗಿಸಿ ಹಾಲಿ ಎಂ.ಎ. ಪದವಿ ಮಾಡುತ್ತಿದ್ದು, ಮೇಲ್ಕಂಡ ತಪ್ಪು 7, 8 ಮತ್ತು 9 ನೇ ಪ್ರತಿವಾದಿಯ ಶಾಲಾ ದಾಖಲಾತಿಗಳಲ್ಲಿಯೂ ಸಹ ಮುಂದುವರೆದಿದ್ದು, ಈ ರೀತಿಯ ತಪ್ಪು ನಮೂದಾಗಿರುವುದು ವಾದಿಯ ಗಮನಕ್ಕೆ ಬಂದಿರುವುದಿಲ್ಲ. ವಾದಿಯ ತಂದೆಯ ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ ಮತ್ತು ಇತರೆ ಎಲ್ಲಾ ದಾಖಲಾತಿಗಳಲ್ಲೂ ವಾದಿಯ ತಂದೆಯ ಹೆಸರು ತೋಳಚನಾಯ್ಕ ಎಂದು ನಮೂದಾಗಿರುತ್ತದೆ. ಅದೇ ರೀತಿ ವಾದಿಯ ಅಂಕಪಟ್ಟಿಯಲ್ಲಿ, ವರ್ಗಾವಣೆ ಪತ್ರದಲ್ಲಿ

Visit **ecourts.gov.in** for updates or download mobile app "**eCourts Services**" from Android or iOS

ಮತ್ತು ಇತರೆ ಶಾಲಾ ದಾಖಲಾತಿಗಳಲ್ಲಿಯೂ ಸಹ ವಾದಿಯ ತಂದೆಯ ಹೆಸರು ಮೇಲ್ಕಂಡ ರೀತಿಯಲ್ಲಿ ತಪ್ಪಾಗಿ ಮುಂದುವರೆದಿರುತ್ತದೆ, ಈ ರೀತಿ ತಪ್ಪು ನಮೂದಾಗಿರುವುದು ವಾದಿಗೆ ಇತ್ತೀಚಿಗೆ ಗಮನಕ್ಕೆ ಬಂದಿರುತ್ತದೆ.

3. ವಾದಿಯು ಮುಂದುವರೆದು ಹೇಳುವುದೇನೆಂದರೆ, ಮೇಲ್ಕಂಡ ತಪ್ಪುಗಳಿಂದ ವಾದಿಯ ಮುಂದಿನ ವಿದ್ಯಾಭ್ಯಾಸಕ್ಕೆ, ಉದ್ಯೋಗಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಮತ್ತು ಇತರೆ ಉದ್ದೇಶಕ್ಕೆ ತೊಂದರೆ ಉಂಟಾಗಿರುತ್ತದೆ. ಸದರಿ ತಪ್ಪನ್ನು ತಿದ್ದುಪಡಿ ಮಾಡುವಂತೆ ಪ್ರತಿವಾದಿಯರನ್ನು ವಿಚಾರಿಸಿದಾಗ ಸದರಿಯವರು ನ್ಯಾಯಾಲಯದ ಆದೇಶ ಇಲ್ಲದೇ ತಿದ್ದುಪಡಿ ಮಾಡುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ, ನಂತರ ವಾದಿಯ ತಂದೆ ಸದರಿ ತಿದ್ದುಪಡಿಗಾಗಿ ತರೀಕೆರೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 87/2016 ನ್ನು ಪ್ರತಿವಾದಿಯರ ವಿರುದ್ಧ ದಾಖಲಿಸಿದ್ದು, ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲವು ವಾದಿಯ ತಂದೆಯ ಹೆಸರು ಇ.ಆರ್.ರಾಜನಾಯ್ಕ ಬದಲಾಗಿ ತೊಳಚನಾಯ್ಕ ಎಂದು ಬದಲಾವಣೆ ಮಾಡುವಂತೆ ಆದೇಶ ಮಾಡಿದ್ದು, ಸದರಿ ಆದೇಶದಂತೆ ವಾದಿಯ ತಂದೆಯ ಹೆಸರನ್ನು ತೊಳಚನಾಯ್ಕ ಎಂದು ಬದಲಾವಣೆಗೊಂಡ ನಂತರ ವಾದಿಯ ಮಗನ ಹೆಸರು ಇ.ಟಿ.ನಾಗೇಂದ್ರಕುಮಾರನಾಯ್ಕ ಬಿನ್ ತೊಳಚನಾಯ್ಕ ಎಂದು ಬದಲಾವಣೆ ಮಾಡಿಕೊಡುವಂತೆ ಕೇಳಿಕೊಂಡಿದ್ದು, ಆದರೆ ಪ್ರತಿವಾದಿಯರು ನ್ಯಾಯಾಲಯದ ಆದೇಶದಲ್ಲಿ ಕೇವಲ ವಾದಿಯ ತಂದೆಯ ಹೆಸರು ಇ.ಆರ್.ರಾಜನಾಯ್ಕ ಬದಲಾಗಿ ತೊಳಚನಾಯ್ಕ ಎಂದು ಬದಲಾವಣೆ ಮಾಡಲು ಆದೇಶ ಮಾಡಲಾಗಿದೆಯೇ

Visit **ecourts.gov.in** for updates or download mobile app "**eCourts Services**" from Android or iOS

ಹೊರತು ವಾದಿಯ ಮಗನ ಹೆಸರಿನ ಇನಿಷಿಯಲ್ ನಲ್ಲಿ ಇ.ಆರ್ ಬದಲಿಗೆ ಇ.ಟಿ.ನಾಗೇಂದ್ರಕುಮಾರನಾಯ್ಕ ಎಂಬುದಾಗಿ ತಿದ್ದುಪಡಿ ಮಾಡಲು ಆದೇಶ ಮಾಡಿಲ್ಲವೆಂದು ವಾಪಸ್ಸು ಕಳುಹಿಸಿರುತ್ತಾರೆ. ನಂತರ ವಾದಿಯ ತಂದೆ ಇದೇ ನ್ಯಾಯಲಯದ ಅಸಲು ದಾವಾ ಸಂಖ್ಯೆ 354/2018 ರಲ್ಲಿ ವಾದಿಯ ತಂದೆಯ ಹೆಸರು ಇ.ಆರ್.ರಾಜನಾಯ್ಕ ಬದಲಾಗಿ ತೊಳಚನಾಯ್ಕ ಎಂದು ಬದಲಾವಣೆಯಾಗಿರುವುದರ ಪರಿಣಾಮವಾಗಿ ಇ.ಆರ್.ನಾಗೇಂದ್ರಕುಮಾರನಾಯ್ಕ ಹೆಸರಿನ ಬದಲಾಗಿ ಇ.ಟಿ.ನಾಗೇಂದ್ರಕುಮಾರ ನಾಯ್ಕ ಬಿನ್ ತೊಳಚನಾಯ್ಕ ಎಂದು ತಿದ್ದುಪಡಿ ಮಾಡಿಕೊಡುವಂತೆ ಕೋರಿ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಕಲಂ 80 ರ ಅಡಿಯಲ್ಲಿ ನೋಟೀಸು ನೀಡಿಲ್ಲ ಹಾಗೂ ಸದರಿ ಸಮಯದಲ್ಲಿ ವಾದಿಯು ಪ್ರಾಪ್ತ ವಯಸ್ಕನಾಗಿರುತ್ತಾನೆ ಎಂಬ ಕಾರಣಕ್ಕೆ ವಾದಿಯ ತಂದೆ ಸಲ್ಲಿಸಿದ ದಾವೆಯನ್ನು ವಜಾಗೊಳಿಸಿ ಆದೇಶ ಮಾಡಿರುತ್ತಾರೆ. ಆದ್ದರಿಂದ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ.

4. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, 1 ರಿಂದ 6 ಮತ್ತು 9 ನೇ ಪ್ರತಿವಾದಿಯರು ಹೆಚ್ಚುವರಿ ಸರ್ಕಾರಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, 3 ನೇ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, 1, 2, 4 ರಿಂದ 6 ಮತ್ತು 9 ನೇ ಪ್ರತಿವಾದಿಯರು ಸದರಿ ಪ್ರತಿವಾದ ಪತ್ರವನ್ನು ತಮ್ಮ ಪರವಾಗಿ ಪರಿಗಣಿಸುವಂತೆ ಮೆಮೋ ಸಲ್ಲಿಸಿರುತ್ತಾರೆ. 7 ಮತ್ತು 8 ನೇ ಪ್ರತಿವಾದಿಯರಿಗೆ ನ್ಯಾಯಾಲಯದ ಸಮನ್ಸ್

ಖುದ್ದು ಜಾರಿಯಾಗಿದ್ದರೂ ಸಹ ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಯಾಗಿರುತ್ತಾರೆ.

5. 1 ರಿಂದ 6 ಮತ್ತು 9 ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯರಿಗೆ ಅಸಲು ದಾವಾ ಸಂಖ್ಯೆ 87/2016 ಮತ್ತು 354/2016 ರಲ್ಲಿ ಆದ ನ್ಯಾಯಾಲಯದ ಪ್ರಕ್ರಿಯೆಗಳನ್ನು ಒಪ್ಪಿಕೊಂಡು, ಉಳಿದ ವಾದ ಪತ್ರದ ಎಲ್ಲಾ ಅಂಶಗಳನ್ನು ಅಲ್ಲಗಳೆದಿದ್ದು, ಮುಂದುವರೆದು ವಾದಿಯ ತಂದೆಯು ವಾದಿಯ ಶಾಲಾ ದಾಖಲಾತಿಗಳಲ್ಲಿ ವಾದಿಯ ಹೆಸರು ಇ.ಆರ್.ನಾಗೇಂದ್ರಕುಮಾರ್ ನಾಯ್ಕ ಬಿನ್ ಇ.ಆರ್.ರಾಜನಾಯ್ಕ ಎಂಬುದಾಗಿ ತಪ್ಪಾಗಿ ನಮೂದಾಗಿದ್ದು, ಕಾರಣ ಇ.ಆರ್.ನಾಗೇಂದ್ರಕುಮಾರ್ ನಾಯ್ಕ ಬಿನ್ ತೊಳಚನಾಯ್ಕ ಎಂದು ಬದಲಾವಣೆ ಮಾಡುವಂತೆ ಕೋರಿ ಅಸಲು ದಾವಾ ಸಂಖ್ಯೆ 87/2016 ನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಸದರಿ ದಾವೆಯು ಡಿಕ್ರಿಯಾಗಿದ್ದು, ಆದರೆ ಸದರಿ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ವಾದಿಯ ತಂದೆಯು ತನ್ನ ಮಗನ ಇನಿಷಿಯಲ್ ಇ.ಟಿ. ಎಂದು ಬದಲಾವಣೆ ಮಾಡಲು ಪರಿಹಾರವನ್ನು ಕೋರಿರುವುದಿಲ್ಲ, ಆದ್ದರಿಂದ ಪ್ರತಿವಾದಿ ಶಾಲೆಯವರು ಇನಿಷಿಯಲ್ ಇ.ಆರ್. ಬದಲಾಗಿ ಇ.ಟಿ. ಎಂದು ನಮೂದಿಸಿರುವುದಿಲ್ಲ. ನಂತರ ವಾದಿ ತಂದೆಯು ಪುನ: ಅಸಲು ದಾವಾ ಸಂಖ್ಯೆ 354/2016 ನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿ ವಾದಿಯ ತಂದೆಯ ಹೆಸರು ಇ.ಆರ್.ರಾಜನಾಯ್ಕ ಬದಲಾಗಿ ತೊಳಚನಾಯ್ಕ ಎಂದು ಬದಲಾವಣೆಯಾಗಿರುವುದರ ಪರಿಣಾಮವಾಗಿ ವಾದಿಯ ಹೆಸರನ್ನು

KACM710001322023

ಇ.ಆರ್.ನಾಗೇಂದ್ರಕುಮಾರ್ ನಾಯ್ಕ ಬದಲಾಗಿ ಇ.ಟಿ.ನಾಗೇಂದ್ರಕುಮಾರ್ ನಾಯ್ಕ ಬಿನ್ ತೊಳಚನಾಯ್ಕ ಎಂದು ತಿದ್ದುಪಡಿ ಮಾಡುವಂತೆ ಕೋರಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಕಲಂ 80 ರ ಅಡಿಯಲ್ಲಿ ನೋಟೀಸು ನೀಡಿಲ್ಲ ಹಾಗೂ ಸದರಿ ಸಮಯದಲ್ಲಿ ವಾದಿಯು ಪ್ರಾಪ್ತ ವಯಸ್ಕನಾಗಿರುತ್ತಾನೆ ಎಂಬ ಕಾರಣಕ್ಕೆ ವಾದಿಯ ತಂದೆಯು ಸಲ್ಲಿಸಿದ ದಾವೆಯನ್ನು ವಜಾಗೊಳಿಸಿ ಆದೇಶ ಮಾಡಿರುತ್ತಾರೆ. ಪ್ರತಿವಾದಿಯರು ಮುಂದುವರೆದು ಹೇಳುವುದೇನೆಂದರೆ ವಾದಿಯ ಕಡೆಯಿಂದ ತಪ್ಪಾಗಿ ದಾವೆಯನ್ನು ದಾಖಲು ಮಾಡಿದ್ದು ಸದರಿ ದಾವೆಯಲ್ಲಿ ಎಲ್ಲಾ ಪರಿಹಾರವನ್ನು ಕೇಳಲು ಅವಕಾಶವಿದ್ದಾಗಲೂ ಸಹ ವಾದಿಯು ಸದರಿ ಪರಿಹಾರಗಳನ್ನು ಕೋರಿರುವುದಿಲ್ಲ, ಆದ್ದರಿಂದ ಸಿ.ಪಿ.ಸಿ. ಆದೇಶ 2 ನಿಯಮ 2 ರಂತೆ ಪುನ: ಅದೇ ಪರಿಹಾರ ಕೋರಿ ಹೊಸ ದಾವೆಯನ್ನು ಹೂಡಲು ಬರುವುದಿಲ್ಲ, ವಾದಿಯು ಒಂದೇ ವ್ಯಾಜ್ಯ ಕಾರಣದ ಮೇಲೆ ಹಲವಾರು ದಾವೆಗಳನ್ನು ಹೂಡಿದ್ದು, ಮನ್ನಿಸಲು ಯಾವುದೇ ಸಕಾರಣವನ್ನೂ ನೀಡದೇ ಇರುವುದರಿಂದ ದಾವೆಯು ಕಾನೂನು ಮತ್ತು ಸಂಗತಿಗಳೆರಡರಿಂದಲೂ ಅಗತ್ಯ ಮಾಹಿತಿಗಳಿಲ್ಲದೇ ದೋಷಪೂರಿತವಾಗಿದ್ದು ಪ್ರಸ್ತುತ ದಾವೆಯನ್ನು ಪುರಸ್ಕರಿಸುವುದು ಸಮಂಜಸ ಆಗಿರುವುದಿಲ್ಲ, ಇಂತಹ ದಾವೆಗಳನ್ನು ಪುರಸ್ಕರಿಸಿದ್ದಲ್ಲಿ ಯಾರದ್ದೋ ಶಾಲೆಯ ದಾಖಲಾತಿ ತಿದ್ದುಪಡಿ ಆಗುವ ಮತ್ತು ಅದರಿಂದ ವಾದಿಯರ ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿ ಆಗುವ ಮತ್ತು ಅದರಿಂದ ಅನುಚಿತ ಲಾಭವನ್ನು ಪಡೆಯುವ ಸಾಧ್ಯತೆ ಇರುತ್ತದೆ. ಆದ್ದರಿಂದ ದಾವೆಯನ್ನು

Visit **ecourts.gov.in** for updates or download mobile app "**eCourts Services**" from Android or iOS

ವಜಾಗೊಳಿಸುವುದು ಅಗತ್ಯವಿರುತ್ತದೆ. ದಾವೆಯು ಕಾಯ್ದೆ ಮತ್ತು ಸಂಗತಿಗಳಿಂದ ಭಾದಿತವಾಗಿದ್ದು, ವಾದಿಯು ವಿನಾಃ ಕಾರಣ ದಾವೆಯನ್ನು ಹೂಡಿ ಪ್ರತಿವಾದಿಯರಿಗೆ ನ್ಯಾಯಾಲಯಕ್ಕೆ ಅಲೆದಾಡುವಂತೆ ಮಾಡಿ ಕಿರುಕುಳವನ್ನುಂಟು ಮಾಡಿ ಅವರ ಅಮೂಲ್ಯ ಸಮಯವನ್ನೂ ಮತ್ತು ನ್ಯಾಯಾಲಯದ ಸಮಯವನ್ನು ಹಾಳು ಮಾಡಿರುತ್ತಾರೆ. ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

6. ಮೇಲ್ಕಾಣಿಸಿದ ವಾದ, ಪ್ರತಿವಾದಪತ್ರಗಳ ಸಂಗತಿಗಳ ಮೇಲೆ ಈ ಕೆಳಕಾಣಿಸಿದ ವಿವಾದಾಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತವೆ ಃ

1) Whether the plaintiff proves that his correct name is E.T.Nagendrakumaranaika S/o Tholachanaika?

2) Whether the plaintiff is entitle for the reliefs as sought in the plaint?

3) What order or decree?

7. ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯ ತನ್ನನ್ನು ತಾನು ವಾಸಾ-1 ಎಂದು ಸಾಕ್ಷೀಕರಿಸಿದ್ದು, ತನ್ನ ಪರವಾಗಿ 9 ದಾಖಲಾತಿಗಳನ್ನು ಹಾಜರುಪಡಿಸಿ ನಿಪಿ-1 ರಿಂದ 9 ಎಂದು ಗುರ್ತಿಸಿಕೊಂಡಿರುತ್ತಾರೆ. 1 ರಿಂದ 6 ಮತ್ತು 9 ನೇ ಪ್ರತಿವಾದಿಯರ

Visit **ecourts.gov.in** for updates or download mobile app "**eCourts Services**" from Android or iOS

ಪರವಾಗಿ ಸಹಾಯಕ ಸರ್ಕಾರಿ ವಕೀಲರು ಸದರಿ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

8. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

9. ಮೇಲ್ಕಾಣಿಸಿದ ವಿವಾದಾಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ ಃ

ವಿವಾದಾಂಶ - 1 ಃ ನಕಾರಾತ್ಮಕವಾಗಿ,
ವಿವಾದಾಂಶ - 2 ಃ ನಕಾರಾತ್ಮಕವಾಗಿ,
ವಿವಾದಾಂಶ - 3 ಃ ಅಂತಿಮ ಆದೇಶದಂತೆ,

ಈ ಕೆಳಗಿನ ಕಾರಣಗಳಿಗಾಗಿ,

ಕಾ ರ ಣ ಗ ಳು

10. **ವಿವಾದಾಂಶ – 1 ಮತ್ತು 2** ಃ ಈ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ವಿವಾದಾಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ವಾಸಾ-1 ಎಂದು ಸಾಕ್ಷೀಕರಿಸಿದ್ದು, ವಾಸಾ-1 ರವರು ತನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ, ವಾದ ಪತ್ರದ ಅಂಶಗಳನ್ನೇ ಪುನರುಚ್ಛರಿಸಿದ್ದು, ತನ್ನ ಪರವಾಗಿ ನಿಪಿ-1 ರಿಂದ 9 ದಾಖಲಾತಿಗಳನ್ನು ಗುರ್ತಿಸಿಕೊಂಡಿರುತ್ತಾರೆ. ನಿಪಿ-1 ಅಸಲು

Visit **ecourts.gov.in** for updates or download mobile app "**eCourts Services**" from Android or iOS

ದಾವಾ ಸಂಖ್ಯೆ 354/2018 ರ ತೀರ್ಪಿನ ದೃಢೀಕೃತ ನಕಲು ಇದ್ದು, ನಿಪಿ-2 ವ್ಯಾಸಂಗ ಪ್ರಮಾಣ ಪತ್ರ ಇದ್ದು, ನಿಪಿ-3 ವಾದಿಯ ವಕೀಲರಿಗೆ 5 ನೇ ಪ್ರತಿವಾದಿಯು ಬರೆದ ಪತ್ರವಾಗಿದ್ದು, ನಿಪಿ-4 ವಾದಿಯು ಪ್ರತಿವಾದಿಯರಿಗೆ ಕಳುಹಿಸಿದ ನೋಟೀಸಿನ ಪ್ರತಿ ಇದ್ದು, ನಿಪಿ-5 ಒಂಬತ್ತು ಅಂಚೆ ರಸೀದಿಗಳು ಇದ್ದು, ನಿಪಿ-6 ಐದು ಅಂಚೆ ಸ್ವೀಕೃತಿಗಳು ಇದ್ದು, ನಿಪಿ-7 ವಾದಿಯ ತಾಯಿಯ ಹೆಸರಿನಲ್ಲಿರುವ ಪಡಿತರ ಚೀಟಿ ಇದ್ದು, ನಿಪಿ-8 ತೊಳಚನಾಯ್ಕರವರ ಚುನಾವಣಾ ಗುರುತಿನ ಚೀಟಿ ಇದ್ದು ಹಾಗೂ ನಿಪಿ-9 ತೊಳಚನಾಯ್ಕರವರ ಆಧಾರ್ ಕಾರ್ಡ್ ಇರುತ್ತದೆ.

11. 1 ರಿಂದ 6 ಮತ್ತು 9 ನೇ ಪ್ರತಿವಾದಿಯರ ಪರವಾಗಿ ಸಹಾಯಕ ಸರ್ಕಾರಿ ವಕೀಲರು ಸದರಿ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

12. ವಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ಈ ಹಿಂದೇ ತನ್ನ ಹೆಸರು ತನ್ನ ಶಾಲಾ ದಾಖಲಾತಿಗಳಲ್ಲಿ ಈ.ಜಿ.ರಾಜನಾಯ್ಕ ಎಂದು ತಪ್ಪಾಗಿ ನಮೂದು ಆಗಿರುವುದು ತೆಗೆದು ಹಾಕಿ ತೊಳಚನಾಯ್ಕ ಎಂದು ನಮೂದಿಸುವಂತೆ ಅಸಲು ದಾವಾ ಸಂಖ್ಯೆ 87/2016 ದಾವೆ ಸಲ್ಲಿಸಿದ್ದೆ ಎಂದರೆ ಸರಿ, ಆ ದಾವೆಯಲ್ಲಿ ತನ್ನ ಇನಿಶಿಯಲ್ ಕೂಡ ಈ.ಟಿ. ಎಂದು ತಿದ್ದುಪಡಿ ಮಾಡಲು ಕೋರಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳಿಂದ ಯಾವುದೇ ತಪ್ಪು ಆಗಿರುವುದಿಲ್ಲ ತಮ್ಮ ತಂದೆ ತಾಯಿ ನೀಡಿರುವ ಮಾಹಿತಿಯಂತೆ ಪ್ರತಿವಾದಿಗಳು ನಮೂದು ಮಾಡಿರುತ್ತಾರೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

KACM710001322023

13. ವಾದಿ ಪರ ವಕೀಲರು, ವಾದಿಯ ತಂದೆಯ ಹೆಸರು ಇ.ಜಿ.ರಾಜನಾಯ್ಕ ಎಂದು ತಪ್ಪಾಗಿ ನಮೂದಾಗಿರುವುದನ್ನು ತೆಗೆದು ತೊಳಚನಾಯ್ಕ ಎಂದು ನಮೂದಿಸಲು ಅಸಲು ದಾವಾ ಸಂಖ್ಯೆ 87/16 ರಲ್ಲಿ ಆದೇಶ ನೀಡಿದ್ದು, ನಂತರ ವಾದಿಯ ತಂದೆಯು ಅಸಲು ದಾವಾ ಸಂಖ್ಯೆ 354/2018 ನ್ನು ಸಲ್ಲಿಸಿ, ವಾದಿಯ ತಂದೆಯ ಹೆಸರು ಇ.ಆರ್.ರಾಜನಾಯ್ಕ ಬದಲಾಗಿ ತೊಳಚನಾಯ್ಕ ಎಂದು ಬದಲಾವಣೆಯಾಗಿರುವುದರ ಪರಿಣಾಮವಾಗಿ ಇ.ಆರ್.ನಾಗೇಂದ್ರಕುಮಾರನಾಯ್ಕ ಹೆಸರಿನ ಬದಲಾಗಿ ಇ.ಟಿ.ನಾಗೇಂದ್ರಕುಮಾರ ನಾಯ್ಕ ಬಿನ್ ತೊಳಚನಾಯ್ಕ ಎಂದು ತಿದ್ದುಪಡಿ ಮಾಡಿಕೊಡುವಂತೆ ಕೋರಿ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಕಲಂ 80 ರ ಅಡಿಯಲ್ಲಿ ನೋಟೀಸು ನೀಡಿಲ್ಲ ಹಾಗೂ ಸದರಿ ಸಮಯದಲ್ಲಿ ವಾದಿಯು ಪ್ರಾಪ್ತ ವಯಸ್ಕನಾಗಿರುತ್ತಾನೆ ಎಂಬ ಕಾರಣಕ್ಕೆ ವಾದಿಯ ತಂದೆ ಸಲ್ಲಿಸಿದ ದಾವೆಯನ್ನು ವಜಾಗೊಳಿಸಿದ್ದು, ನಂತರ ಪ್ರಸ್ತುತ ವಾದಿಯು ಅಸಲು ದಾವಾ ಸಂಖ್ಯೆ 354/2018 ರಲ್ಲಿ ಕೇಳಿದ ಪರಿಹಾರವನ್ನು ಕೋರಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುವುದಾಗಿ ತಮ್ಮ ವಾದ ಮಂಡಿಸಿರುತ್ತಾರೆ.

14. 1 ರಿಂದ 6 ಮತ್ತು 9 ನೇ ಪ್ರತಿವಾದಿಯರ ಪರವಾಗಿ ಸಹಾಯಕ ಸರ್ಕಾರಿ ವಕೀಲರು, ವಾದಿಯು ಒಂದೇ ವ್ಯಾಜ್ಯ ಕಾರಣದ ಮೇಲೆ ಹಲವಾರು ದಾವೆಗಳನ್ನು ಹೂಡಿದ್ದು, ಯಾವುದೇ ಸಕಾರಣವನ್ನೂ ನೀಡದೇ ಇರುವುದರಿಂದ ದಾವೆಯು ಕಾನೂನು ಮತ್ತು ಸಂಗತಿಗಳೆರಡರಿಂದಲೂ ಅಗತ್ಯ ಮಾಹಿತಿಗಳಿಲ್ಲದೇ ದೋಷಪೂರಿತವಾಗಿದ್ದು

Visit **ecourts.gov.in** for updates or download mobile app "**eCourts Services**" from Android or iOS

ಪ್ರಸ್ತುತ ದಾವೆಯು ವಜಾ ಮಾಡಲು ಯೋಗ್ಯವಾಗಿರುತ್ತದೆ ಎಂದು ತಮ್ಮ ವಾದ ಮಂಡಿಸಿರುತ್ತಾರೆ.

15. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ ವಾದಿಯು ತಮ್ಮ ವಾದ ಪತ್ರದಲ್ಲಿ ತನ್ನ ತಂದೆಯು ಅಸಲು ದಾವಾ ಸಂಖ್ಯೆ 87/2016 ನ್ನು ಸಲ್ಲಿಸಿ ಶಾಲಾ ದಾಖಲಾತಿಗಳಲ್ಲಿ ತನ್ನ ತಂದೆಯ ಹೆಸರು ಇ.ಜಿ.ರಾಜನಾಯ್ಕ ಎಂದು ತಪ್ಪಾಗಿ ನಮೂದಾಗಿರುವುದನ್ನು ತೆಗೆದು ತೊಳಚನಾಯ್ಕ ಎಂದು ನಮೂದಿಸುವಂತೆ ಹೂಡಿದ್ದು ಹಾಗೂ ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂದು ಹೇಳಿದ್ದು, ಸದರಿ ಅಂಶವನ್ನು 1 ರಿಂದ 6 ಮತ್ತು 9 ನೇ ಪ್ರತಿವಾದಿಯರು ತಮ್ಮ ವಾದ ಪತ್ರದಲ್ಲಿ ಅಲ್ಲಗಳೆದಿರುವುದಿಲ್ಲ.

16. ಈ ಹಂತದಲ್ಲಿ ನ್ಯಾಯಾಲಯವು ಸಿ.ಪಿ.ಸಿ. ಆದೇಶ-2 ನಿಯಮ-2 ನ್ನು ಉಲ್ಲೇಖಿಸಲು ಬಯಸುತ್ತದೆ, ಸಿವಿಲ್ ಪ್ರೊಸೀಜರ್ ಕೋಡ್ 1908 ರ ಆದೇಶ 2, ನಿಯಮ 2 ರ ಪ್ರಕಾರ, ಒಂದು ದಾವೆಯಲ್ಲಿ ವಾದಿಯು ತನ್ನ ಹಕ್ಕಿನ (cause of action) ಸಂಬಂಧಿತ ಸಂಪೂರ್ಣ ಪರಿಹಾರಗಳನ್ನು ಸೇರಿಸಬೇಕು, ಒಂದು ವೇಳೆ ಉದ್ದೇಶಪೂರ್ವಕವಾಗಿ ಭಾಗಶಃ ಪರಿಹಾರಗಳನ್ನು ಬಿಟ್ಟುಬಿಟ್ಟರೆ ಅಥವಾ ಪರಿತ್ಯಜಿಸಿದರೆ, ನಂತರದ ದಾವೆಯಲ್ಲಿ ಆ ಬಿಟ್ಟ ಭಾಗಕ್ಕಾಗಿ ದಾವೆ ಹೂಡಲು ಅವಕಾಶವಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿನ ಅಂಶಗಳನ್ನು ಗಮನಿಸಿದಾಗ ವಾದಿಯ ತಂದೆಯು ಅಸಲು ದಾವಾ ಸಂಖ್ಯೆ 87/2016 ನ್ನು ಸಲ್ಲಿಸಿ ವಾದಿಯ ಶಾಲಾ ದಾಖಲಾತಿಗಳಲ್ಲಿ ತಂದೆಯ ಹೆಸರು

Visit **ecourts.gov.in** for updates or download mobile app "**eCourts Services**" from Android or iOS

ಇ.ಜಿ.ರಾಜನಾಯ್ಕ ಎಂದು ತಪ್ಪಾಗಿ ನಮೂದಾಗಿರುವುದನ್ನು ತೆಗೆದು ತೊಳಚನಾಯ್ಕ ಎಂದು ನಮೂದಿಸುವಂತೆ ಹೂಡಿದ್ದು ಹಾಗೂ ಸದರಿ ದಾವೆಯು ಡಿಕ್ರಿಯಾಗಿದ್ದು, ಆದರೆ ಅದೇ ವ್ಯಾಜ್ಯ ಕಾರಣದಿಂದ ಉಂಟಾದ ತತ್ಪರಿಣಾಮ ಪರಿಹಾರವಾದ ವಾದಿಯ ಇನಿಷಿಯಲ್ ಬದಲಾವಣೆ ಮಾಡಲು ಸದರಿ ದಾವೆಯಲ್ಲಿ ಕೋರಿರುವುದಿಲ್ಲ. ನಂತರ ಪ್ರಸ್ತುತ ದಾವೆಯನ್ನು ಇನಿಷಿಯಲ್ ಬದಲಾವಣೆ ಮಾಡಲು ಕೋರಿ ಸಲ್ಲಿಸಿದ್ದು, ಆದರೆ ಒಂದೇ ವ್ಯಾಜ್ಯ ಕಾರಣದಿಂದ ಉಂಟಾಗುವ ಎಲ್ಲಾ ಪರಿಹಾರಗಳನ್ನು ಒಂದೇ ದಾವೆಯಲ್ಲಿ ಕೇಳಬೇಕಾಗಿದ್ದು, ವಾದಿಯು ಆ ರೀತಿ ಯಾವುದೇ ಕ್ರಮ ಕೈಗೊಳ್ಳದೆ ಕೇಳಬೇಕಾದ ಎಲ್ಲಾ ಪರಿಹಾರಗಳನ್ನು ಭಾಗವಾಗಿ ಬೇರ್ಪಡಿಸಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುವುದು ಕಾನೂನಿನ ಅಡಿಯಲ್ಲಿ ನಿಲ್ಲತಕ್ಕದ್ದಲ್ಲ. ಆದರೆ ವಾದಿಯ ಇನಿಷಿಯಲ್ ಬದಲಾವಣೆ ಮಾಡುವಂತೆ ಅಧಿಕಾರಿಗಳನ್ನು ವಿಚಾರಿಸಿದಾಗ ಸದರಿಯವರು ನ್ಯಾಯಾಲಯದ ಆದೇಶ ಪಡೆದುಕೊಂಡು ಬರುವಂತೆ ತಿಳಿಸಿರುತ್ತಾರೆ ಎಂಬುದನ್ನು ಆಧಾರವಾಗಿ ಇಟ್ಟುಕೊಂಡು ಪ್ರಸ್ತುತ ದಾವೆಯನ್ನು ಹೂಡಲು ಹೊಸ ವ್ಯಾಜ್ಯ ಕಾರಣವುಂಟಾಗಿರುತ್ತದೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ಅಂಶವನ್ನು ಗಮನಿಸಿದಾಗ ಅದು ಕೇವಲ ಅಧಿಕಾರಿಗಳ ಆಡಳಿತಾತ್ಮಕ ಕ್ರಮ ಮಾತ್ರವಾಗಿದ್ದು, ವಾದಿಗೆ ಪ್ರಸ್ತುತ ದಾವೆಯನ್ನು ಹೂಡಲು ಯಾವುದೇ ಹೊಸ ವ್ಯಾಜ್ಯ ಕಾರಣವಾಗಿರುವುದಿಲ್ಲ ಎಂದು ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಆದ್ದರಿಂದ ವಾದಿಯು ಒಂದೇ ವ್ಯಾಜ್ಯ ಕಾರಣದಿಂದ ಉದ್ಭವಿಸಿರುವ ಪರಿಹಾರಗಳನ್ನು ವಿಭಜಿಸಿ ದಾಖಲಿಸಿರುವುದರಿಂದ ಸಿ.ಪಿ.ಸಿ. ಆದೇಶ-2

Visit **ecourts.gov.in** for updates or download mobile app "**eCourts Services**" from Android or iOS

ನಿಯಮ-2 ರಡಿಯಲ್ಲಿ ಪ್ರಸ್ತುತ ದಾವೆಯು ಕಾನೂನಿನಡಿಯಲ್ಲಿ ನಿಲ್ಲತಕ್ಕದ್ದಲ್ಲ ಎಂದು ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಅದೂ ಅಲ್ಲದೆ ವಾದಿಯು ಈಗಾಗಲೇ ತಮ್ಮ ಹೆಸರಿನ ಬದಲಾವಣೆಗಾಗಿ ಇದೇ ನ್ಯಾಯಾಲಯದಿಂದ ಡಿಕ್ರಿಯನ್ನು ಪಡೆದಿದ್ದು, ಸಿವಿಲ್ ಪ್ರಕ್ರಿಯ ಸಂಹಿತೆ ಕಲಂ 11 ರಡಿಯಲ್ಲಿ ಒಂದು ವಿಷಯವು ಈಗಾಗಲೇ ನಿರ್ಧರಿಸಲ್ಪಟ್ಟಿದ್ದರೆ ಅದೇ ಪಕ್ಷಗಾರರ ನಡುವೆ ಮತ್ತೆ ಅದೇ ವಿಷಯದ ಬಗ್ಗೆ ದಾವೆ ಹೂಡುವಂತಿಲ್ಲ ಮತ್ತು ವಾದಿಯು ಮೊದಲು ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲೇ ಇನಿಷಿಯಲ್ ಬದಲಾವಣೆ ಅಗತ್ಯವಿದ್ದು, ವಾದಿಯು ಆ ಸಮಯದಲ್ಲಿ ಸದರಿ ಪರಿಹಾರವನ್ನು ಕೇಳದೇ ಈಗ ಮತ್ತೊಂದು ದಾವೆಯ ಮೂಲಕ ಕೇಳಿರುವುದು ಸಿ.ಪಿ.ಸಿ. ಕಲಂ 11 ರಡಿಯಲ್ಲಿ ಅವಕಾಶವಿರುವುದಿಲ್ಲ. ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದಾಗಿ ವಾದಿಯು ಪ್ರಸ್ತುತ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದ್ದರಿಂದ ವಿವಾದಾಂಶ-1 ಮತ್ತು 2 ನ್ನು ನಕಾರಾತ್ಮಕ ಎಂದು ಉತ್ತರಿಸಲಾಗಿದೆ.

17. <u>ವಿವಾದಾಂಶ **- 3**</u> ಃ ಈ ಮೇಲ್ಕಂಡ ವಿವಾದಾಂಶ-1 ಮತ್ತು 2 ನ್ನು ನಿರ್ಣಯಿಸಲಾಗಿ ಮತ್ತು ಅವುಗಳಿಗೆ ನೀಡಿದ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

KACM710001322023

## ಆದೇಶ

ವಾದಿಯು ಸಲ್ಲಿಸಿದ ದಾವೆಯನ್ನು ಖರ್ಚು ಸಹಿತ ವಜಾ ಮಾಡಲಾಗಿದೆ.

ಈ ಪ್ರಕಾರ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 29 ನೇ ಏಪ್ರಿಲ್ 2026 ರಂದು ಘೋಷಿಸಲಾಯಿತು)

URMILA V Digitally signed by URMILA V Date: 2026.04.30 11:00:27 +0530

ಸಹಿ
**(** ಉರ್ಮಿಳ**.**ವಿ **)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ**.**ದ**.**ನ್ಯಾ**.**ದಂ**.,** ತರೀಕೆರೆ**.**

## ಅನುಬಂಧ

ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ**:-**

ವಾಸಾ-1 : ನಾಗೇಂದ್ರಕುಮಾರನಾಯ್ಕ

ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು**:-**

| | | |
|---|---|---|
| ನಿಪಿ-1 | : | ಅಸಲು ದಾವಾ ಸಂಖ್ಯೆ 354/2018 ರ ತೀರ್ಪಿನ ದೃಢೀಕೃತ ನಕಲು |
| ನಿಪಿ-2 | : | ವ್ಯಾಸಂಗ ಪ್ರಮಾಣ ಪತ್ರ |
| ನಿಪಿ-3 | : | 5 ನೇ ಪ್ರತಿವಾದಿಯು ಬರೆದ ಪತ್ರ |
| ನಿಪಿ-4 | : | ಪ್ರತಿವಾದಿಯರಿಗೆ ಕಳುಹಿಸಿದ ನೋಟೀಸಿನ ಪ್ರತಿ |
| ನಿಪಿ-5 | : | 9 ಅಂಚೆ ರಸೀದಿಗಳು |
| ನಿಪಿ-6 | : | 5 ಅಂಚೆ ಸ್ವೀಕೃತಿಗಳು |
| ನಿಪಿ-7 | : | ವಾದಿಯ ತಾಯಿಯ ಹೆಸರಿನಲ್ಲಿರುವ ಪಡಿತರ ಚೀಟಿ |
| ನಿಪಿ-8 | : | ತೊಳಚನಾಯ್ಕರವರ ಚುನಾವಣಾ ಗುರುತಿನ ಚೀಟಿ |
| ನಿಪಿ-9 | : | ತೊಳಚನಾಯ್ಕರವರ ಆಧಾರ್ ಕಾರ್ಡ್ |

ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ**:-**

- ಇಲ್ಲ -

KACM710001322023

<u>ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-</u>

- ಇಲ್ಲ -

URMILA V

Digitally signed by URMILA V
Date: 2026.04.30 11:00:18 +0530

ಸಹಿ
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.